‘ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆ ಶ್ಲಾಘನೀಯ’

ಕುಶಾಲನಗರ ಎ.25: ಕುಶಾಲನಗರ ಹಿತರಕ್ಷಣಾ ಸಮಿತಿಯ ಎರಡನೆ ಸಭೆಯು ಸಂಚಾಲಕ ಕೆ.ಜಿ ಮನು ಅವರ ಅಧ್ಯಕ್ಷತೆಯಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ನಡೆಯಿತು.

ನಗರದಲ್ಲಿ ನಿಯಮ ಉಲ್ಲಂಘಿಸಿದ ಬಹುಮಹಡಿ ಕಟ್ಟಡಗಳನ್ನು ತೆರವುಗೊಳಿಸಲು ಮುಂದಾಗಿರುವ ಪಟ್ಟಣ ಪಂಚಾಯತ್ ಅಧಿಕಾರಿಗಳ ಕ್ರಮಕ್ಕೆ ಹೋರಾಟ ಸಮಿತಿಯು ಬೆಂಬಲ ಸೂಚಿಸಿತು.

ನಂತರ ಮಾತನಾಡಿದ ಸಂಚಾಲಕ ಕೆ.ಜಿ ಮನು, ಪಟ್ಟಣದ ಹಿತದೃಷ್ಟಿಯಿಂದ ಅಧಿಕಾರಿಗಳು ಕೈಗೆತ್ತಿಕೊಂಡಿರುವ ಕ್ರಮ ಶ್ಲಾಘನಾರ್ಹವಾಗಿದ್ದು,ಮುಂದಿನ ದಿನಗಳಲ್ಲಿ ಇಂತಹ ಕಾರ್ಯಾಚರಣೆಗಳು ನಿರಂತರವಾಗಿ ನಡೆಯುವಂತಾಗಬೇಕು. ಈ ಸಂದರ್ಭ ಯಾವುದೇ ಜನಪ್ರತಿನಿಧಿಗಳು ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಯುಂಟು ಮಾಡಬಾರದು. ಈ ನಡುವೆ ಕುಶಾಲನಗರ ಪಟ್ಟಣದಲ್ಲಿ ವಿವಿಧ ಬಡಾವಣೆಗಳಲ್ಲಿ ಉದ್ಯಾನವನಗಳು, ರಸ್ತೆಗಳು ಹಾಗೂ ಸಾರ್ವಜನಿಕರಿಗೆ ಮೀಸಲಿರಿಸಲಾದ ಜಾಗಗಳ ಒತ್ತುವರಿ ಪರಿಶೀಲನೆಗಾಗಿ ವಿಶೇಷ ಟಾಸ್ಕ್ ಫೋರ್ಸ್ ರಚನೆಗೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡುವುದು. ನಗರದ ಸುತ್ತಮುತ್ತ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ದಂಧೆಗಳ ಬಗ್ಗೆ ಡಿವೈಎಸ್ಪಿ ಗಮನಕ್ಕೆ ತಂದು ಕಠಿಣ ಕ್ರಮ ಕೈಗೊಳ್ಳಲು ಒತ್ತಾಯಿಸುವುದು. ಹೊಟೇಲ್‌ಗಳಲ್ಲಿ ಗ್ರಾಹಕರಿಂದ ಹೆಚ್ಚುವರಿ ದರ ಪಡೆಯುವುದು ಕಂಡುಬಂದಿದ್ದು, ಪ್ರತೀ ಹೊಟೇಲ್‌ನಲ್ಲಿ ದರ ಪಟ್ಟಿ ಅಳವಡಿಸಲು ಒತ್ತಾಯ ಮುಂತಾದವುಗಳ ಬಗ್ಗೆ ಚರ್ಚೆ ನಡೆದು ಮನವಿ ಪತ್ರವನ್ನು ಪ.ಪಂಚಾಯತ್ ಅಧಿಕಾರಿಗಳಿಗೆ ನೀಡಲು ಸಭೆ ನಿರ್ಧರಿಸಿತು.

ಈ ಸಂದರ್ಭದಲ್ಲಿ ಸಮಿತಿಯ ಗೌರವಾಧ್ಯಕ್ಷ ನಂಜುಂಡಸ್ವಾಮಿ, ಸಂಘದ ಪ್ರಮುಖರಾದ ಚಂದ್ರಮೋಹನ್, ಎಂ.ಡಿ.ಕೃಷ್ಣಪ್ಪ , ಎಂ.ಕೃಷ್ಣ, ನಿಡ್ಯಮಲೆ ದಿನೇಶ್, ಕೆ.ಎಸ್.ನಾಗೇಶ್, ಅರುಣ್ ಕುಮಾರ್, ವೈಶಾಖ್, ಮಂಜುನಾಥ್ ಮತ್ತಿತರರಿದ್ದರು.

ವೇತನ ಆಯೋಗ ರಚನೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಮಂಗಳವಾರ ಶಿವಮೊಗ್ಗ ನಗರದ ಬಿಇಒ ಕಚೇರಿ ಎದುರು ಧರಣಿ ನಡೆಸಿತು.ಧರಣಿಯಲ್ಲಿ ಸಂಘದ ಮುಖಂಡರಾದ ಎಂ. ರವಿ, ಎಚ್.ವಿರೂಪಾಕ್ಷಪ್ಪ, ಪ್ರಸಾದ್ ಬಾಬು, ಹಾಲೇಶಪ್ಪ, ಆನಂದಪ್ಪ, ಮಂಜಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ವೇತನ ಆಯೋಗ ರಚನೆಗೆ ಆಗ್ರಹಿಸಿ ಶಿಕ್ಷಕರ ಧರಣಿ

ಶಿವಮೊಗ್ಗ, ಎ.25: ವೇತನ ಆಯೋಗ ರಚನೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಮಂಗಳವಾರ ನಗರದ ಬಿಇಒ ಕಚೇರಿ ಎದುರು ಧರಣಿ ನಡೆಸಿ, ಸ್ಥಳೀಯ ಅಧಿಕಾರಿಗಳ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿತು.

ಶಿಕ್ಷಕರ ಹೆಚ್ಚುವರಿ ಹುದ್ದೆ ಸ್ಥಳಾಂತರ ಸಂದರ್ಭದಲ್ಲಿ ಮಲೆನಾಡು ಜಿಲ್ಲೆಗಳಿಗೆ ಆದ್ಯತೆ ನೀಡಬೇಕು. ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಪ್ರಾಥಮಿಕ ಶಿಕ್ಷಣ ಮಂಡಳಿ ಸ್ಥಾಪಿಸಬೇಕು. ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಆರಂಭಿಸಬೇಕು ಎಂದು ಧರಣಿನಿರತರು ಆಗ್ರಹಿಸಿದ್ದಾರೆ.

ಸರಕಾರಿ ಶಾಲೆಗಳ ಸಬಲೀಕರಣಕ್ಕೆ ಕ್ರಮಕೈಗೊಳ್ಳಬೇಕು. ಪ್ರತೀ ವರ್ಗಕ್ಕೆ ಒಬ್ಬ ಶಿಕ್ಷಕನನ್ನು ಹಾಗೂ ಶಾಲೆಗೆ ಓರ್ವ ಮುಖ್ಯೋಪಾಧ್ಯಾಯರನ್ನು ನೇಮಿಸಬೇಕು. ಬಡ್ತಿ ಮುಖ್ಯ ಶಿಕ್ಷಕರಿಗೆ ಪ್ರತ್ಯೇಕ ವೇತನ ಶ್ರೇಣಿ ನಿಗದಿಗೊಳಿಸಬೇಕು. ಶಿಕ್ಷಕರು ಮುಖ್ಯ ಶಿಕ್ಷಕರ ಪ್ರಭಾರಿ ಹುದ್ದೆ ನಿರ್ವಹಿಸುವಾಗ ಪ್ರಭಾರಿ ಭತ್ತೆಯನ್ನು ನೀಡಬೇಕು ಎಂದು ಧರಣಿನಿರತರು ಒತ್ತಾಯಿಸಿದರು.

ವಿಳಂಬಕ್ಕೆ ಆಸ್ಪದವಾಗದಂತೆ ತತ್‌ಕ್ಷಣವೇ ಮುಖ್ಯಮಂತ್ರಿ ಅವರು ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಕಾಲಮಿತಿಯಲ್ಲಿ ಬೇಡಿಕೆ ಈಡೇರಿಕೆಗೆ ಕ್ರಮಕೈಗೊಳ್ಳಬೇಕು ಎಂದರು.

ಧರಣಿಯಲ್ಲಿ ಸಂಘದ ಮುಖಂಡರಾದ ಎಂ. ರವಿ, ಎಚ್.ವಿರೂಪಾಕ್ಷಪ್ಪ, ಪ್ರಸಾದ್ ಬಾಬು, ಹಾಲೇಶಪ್ಪ, ಆನಂದಪ್ಪ, ಮಂಜಪ್ಪ ಮತ್ತಿತತರು ಪಾಲ್ಗೊಂಡಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಟ್ಟಡ ಕಾರ್ಮಿಕರ ಧರಣಿ

ಚಿಕ್ಕಮಗಳೂರು, ಎ.25: ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಜೀವನ ಭದ್ರತೆಗೆ ಅಗತ್ಯವಾದ ಸವಲತ್ತು ಒದಗಿಸಲು ಆಗ್ರಹಿಸಿ ಮಂಗಳವಾರ ನಗರದ ಆಝಾದ್‌ಪಾರ್ಕ್ ವೃತ್ತದಲ್ಲಿ ಧರಣಿ ನಡೆಸಿದ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿ ಮೂಲಕ ಕೇಂದ್ರ ಕಾರ್ಮಿಕ ಸಚಿವರು ಮತ್ತು ಆಯುಕ್ತರಿಗೆ ಮನವಿ ಸಲ್ಲಿಸಿದರು.

ಈ ಸಮಯದಲ್ಲಿ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಜಿ.ರಘು ಮಾತನಾಡಿ, ಕಟ್ಟಡ ನಿರ್ಮಾಣ ಇತರೆ ಕೆಲಸದಲ್ಲಿ ನಿರತರಾಗಿರುವ ಕಾರ್ಮಿಕರಿಗೆ ಜೀವನ ಭದ್ರತೆಯ ಕಾನೂನಿನ ಅಗತ್ಯವಿದೆ. ಇಂದು ಕಾನೂನುಬದ್ಧ ಸವಲತ್ತುಗಳು ದೊರೆಯದಿರುವ ಹಿನ್ನೆಲೆಯಲ್ಲಿ ಕಾರ್ಮಿಕರು ಸಂಕಷ್ಟದಲ್ಲಿ ಬದುಕುತ್ತಿದ್ದಾರೆ. ಅಪಾರ ಶ್ರಮವಹಿಸಿ ದುಡಿದರೂ ಅವರಿಗೆ ದುಡಿಮೆಗ ತಕ್ಕ ಪ್ರತಿಫಲವಾಗಲೀ, ಸಮಾನ ಕೆಲಸಕ್ಕೆ ಸಮಾನ ವೇತನವಾಗಲಿ ದೊರೆಯುತ್ತಿಲ್ಲ. ಕೆಲಸದ ಸಂದರ್ಭದಲ್ಲಿ ಉಂಟಾಗುವ ಅಪಘಾತ-ಅವಘಡಗಳಿಗೆ ಸೂಕ್ತ ರೀತಿಯ ಪರಿಹಾರ ದೊರೆಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬದುಕಿನ ಭದ್ರತೆಗೆ ಅಗತ್ಯವಾದ ಪಿಂಚಣಿ, ಆರೋಗ್ಯ ಯೋಜನೆಯು ಜಾರಿಯಾಗಿಲ್ಲ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೂಡಲೇ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಹಲವು ಸಮರ್ಪಕ ಬೇಡಿಕೆಗಳನ್ನು ಈಡೇರಿಸಬೇಕು. ಆಳುವ ಸರಕಾರಗಳು ಕಾರ್ಮಿಕರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು.

ಮಂಡಳಿ ವತಿಯಿಂದ ವಸತಿ ಯೋಜನೆ ಜಾರಿಗೊಳಿಸಬೇಕು. ವಾಸಿಸಲು ಮನೆ ಖರೀದಿ ಅಥವಾ ಮನೆ ನಿರ್ಮಿಸಿಕೊಳ್ಳಲು 2 ಲಕ್ಷ ರೂ. ಮಂಜೂರು ಮಾಡಬೇಕು. ಫಲಾನುಭವಿ ಇಬ್ಬರು ಮಕ್ಕಳಿಗೆ 1ನೆ ತರಗತಿಯಿಂದ ಉನ್ನತ ವ್ಯಾಸಂಗದವರೆಗೆ ಸಂಪೂರ್ಣ ವೆಚ್ಚವನ್ನು ಮಂಡಳಿ ಭರಿಸಬೇಕು. ಪ್ರಸ್ತುತ ನೀಡುತ್ತಿರುವ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನವನ್ನು ಪ್ಯಾರಾ ಮೆಡಿಕಲ್ ಹಾಗೂ ಚಿತ್ರಕಲಾ ವಿದ್ಯಾಭ್ಯಾಸಕ್ಕೂ ವಿಸ್ತರಿಸಬೇಕು ಎಂದು ಧರಣಿನಿರತರು ಆಗ್ರಹಿಸಿದ್ದಾರೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುವುದು. ಸೆಸ್ ಹಣ ಸಂಗ್ರಹ ಹಾಗೂ ಸೆಸ್ ಹಣ ದುರುಪಯೋಗವಾಗದಂತೆ ಕ್ರಮ ಜರಗಿಸಬೇಕು. ಕಲ್ಯಾಣ ಮಂಡಳಿ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿ ನಿಯೋಜನೆಗೊಳಿಸಬೇಕು. ವಲಸೆ ಕೆಲಸಗಾರರ ಸಂಬಂಧ ಕಾಯ್ದೆ ಜಾರಿಗೊಳಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸುಪ್ರಿಂ ಕೋರ್ಟ್ ತೀರ್ಪು ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ಧರಣಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಜಯಕುಮಾರ್, ಸಿಪಿಐ ಕಾರ್ಯದರ್ಶಿ ಜಾರ್ಜ್, ತಾಲೂಕು ಅಧ್ಯಕ್ಷ ವಸಂತಕುಮಾರ್, ಉಪಾಧ್ಯಕ್ಷ ಮುಕ್ತಿಯಾರ್ ಅಹ್ಮದ್, ಪರಮೇಶ್, ಮಂಜುಳಾ, ರೇಖಾ ಪಾಲ್ಗೊಂಡಿದ್ದರು.

ಬೇಡಿಕೆಗಳು

ಅಪಘಾತ ಪರಿಹಾರವನ್ನು 10 ಲಕ್ಷ ರೂ.ಗೆ ಹೆಚ್ಚಿಸಬೇಕು. ಪಿಂಚಣಿ ಮೊತ್ತವನ್ನು ಕನಿಷ್ಠ 3000 ರೂ.ಗೆ ಹೆಚ್ಚಿಸಬೇಕು. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ಇಎಸ್‌ಐ ಮತ್ತು ಭವಿಷ್ಯನಿಧಿ ಯೋಜನೆಗಳನ್ನು ಜಾರಿಗೊಳಿಸಬೇಕು. ಕಾರ್ಮಿಕರ ವೈದ್ಯಕೀಯ ಅರ್ಜಿ ವಿಲೇವಾರಿಗೆ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪ್ರತ್ಯೇಕ ವೈದ್ಯರನ್ನು ನೇಮಿಸಬೇಕು. ಕಾರ್ಮಿಕರು ನಿಧನರಾದಾಗ ಅಂತ್ಯಕ್ರಿಯೆಗೆ ತಕ್ಷಣವೇ 4,000 ರೂ.ವಿತರಿಸಬೇಕು.

ಅಪ್ರಾಪ್ತ ವಯಸ್ಸಿನ ಬಾಲಕಿ ಅತ್ಯಾಚಾರ ಪ್ರಕರಣ

ಕ್ರಮಕ್ಕೆ ಆಗ್ರಹಿಸಿ ಸಂತ್ರಸ್ತೆಯ ಕುಟುಂಬದಿಂದ ಜಿಲ್ಲಾಡಳಿತಕ್ಕೆ ಮನವಿ

ಕಾರವಾರ, ಎ.25: ಅಪ್ರಾಪ್ತಳ ಅತ್ಯಾಚಾರವೆಸಗಿದ ಬಗ್ಗೆ ದೂರು ಸಲ್ಲಿಸಿ ಒಂದೂವರೆ ತಿಂಗಳುಗಳಾದರೂ ಇದುವರೆಗೆ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸ್ ಇಲಾಖೆ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿ ಸಂತ್ರಸ್ತ ಮಹಿಳೆಯ ಕುಟುಂಬದವರು ಮಂಗಳವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಘಟನೆ ಹಿನ್ನೆಲೆ: ಹೊನ್ನಾವರ ತಾಲೂಕಿನ ಕರ್ಕಿಯಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಅಪ್ರಾಪ್ತ ವಯಸ್ಸಿನ ಬಾಲಕಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಳು. ಕುಮಟಾದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ ಸಮಸ್ಯೆ ಬಿಗಡಾಯಿಸಿತ್ತು.ವೈದ್ಯರ ಸಲಹೆ ಮೇರೆಗೆ ಮಂಗಳೂರಿನ ಆಸ್ಪತ್ರೆಗೆ ತೆರಳಿ ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಳು. ಬಳಿಕ ಔಷಧಿಗಳನ್ನು ಸೇವಿಸುತ್ತ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದಳು. ಈ ಸಂದರ್ಭದಲ್ಲಿ ಅವರು ವಾಸಿಸುತ್ತಿರುವ ಮನೆಯ ಮಾಲಕಿಯಾದ ಲಕ್ಷ್ಮಿ ಪಡ್ತಿಯ ಮನೆಗೆ ಆಗಾಗ ಬಂದು ಹೋಗುತ್ತಿದ್ದ ಗುತ್ತಿಗೆದಾರ ಸುಬ್ರಹ್ಮಣ್ಯ ರಾಮ ಭಂಡಾರಿ ಎಂಬವನು ಮನೆಯಲ್ಲಿ ಈಕೆ ಒಬ್ಬಳೆ ಇರುವುದನ್ನು ಕಂಡು ಅಮಲು ಬರಿಸುವ ಮಾತ್ರೆಗಳನ್ನು ನೀಡಿ ಅತ್ಯಾಚಾರವೆಸಗಿದ್ದ ಎನ್ನಲಾಗಿದೆ.

ಆದರೆ ಈ ಕುರಿತು ವಿಜಯಾ ಯಾರ ಬಳಿಯೂ ವಿಷಯವನ್ನು ಹೇಳಿಕೊಂಡಿರಲಿಲ್ಲ. ಆದರೆ ದಿನ ಕಳೆದಂತೆ ಇವಳಲ್ಲಿ ಆಗುತ್ತಿರುವ ದೈಹಿಕ ಬದಲಾವಣೆಗಳನ್ನು ಗಮನಿಸಿದ ತಾಯಿ ಭಾರತಿ ಅಂಬಿಗ ವೈದ್ಯರಲ್ಲಿ ತೋರಿಸಿದಾಗ ಗರ್ಭಿಣಿ ಆಗಿರುವ ವಿಚಾರ ತಿಳಿದು ಬಂದಿದೆ. ಈ ವಿಷಯದ ಕುರಿತು ಇವಳ ಕುಟುಂಬದವರು ಕುಮಟಾದ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಮೊರೆ ಹೋಗಿದ್ದಾರೆ. ಕುಟುಂಬಕ್ಕೆ ನ್ಯಾಯ ದೊರಕಿಸಿ ಕೊಡಲು ಸಹಾಯಕ್ಕೆ ನಿಂತ ಸಂಘಟನೆಯು ಹೊನ್ನಾವರ ಠಾಣೆಯಲ್ಲಿ ಈ ಕುರಿತು ಸುಬ್ರಹ್ಮಣ್ಯ ವಿರುದ್ಧ ಅತ್ಯಾಚಾರದ ದೂರನ್ನು ಸಲ್ಲಿಸಿತ್ತು. ಆದರೆ ಪ್ರಕರಣ ದಾಖಲಾಗಿ 45 ದಿನ ಕಳೆದರೂ ಇದುವರೆಗೂ ಆರೋಪಿಯನ್ನು ಬಂಧಿಸಿಲ್ಲ. ಕೂಡಲೇ ಈ ಕುರಿತು ಕ್ರಮ ಕೈಗೊಳ್ಳ ಬೇಕು ಎಂದು ಮನವಿಯಲ್ಲಿ ವಿನಂತಿಸಿದ್ದಾರೆ.

ವರಿಷ್ಠಾಧಿಕಾರಿಗೆ ಮನವಿ: ಅತ್ಯಾಚಾರ ಆರೋಪಿಯನ್ನು ಶೀಘ್ರ ಬಂಧಿಸುವಂತೆ ಬಾಲಕಿಯ ಕುಟುಂಬದವರೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೂ ತೆರಳಿ ಮನವಿ ಸಲ್ಲಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಜಿ.ದೇವರಾಜು ಆರೋಪಿಯು ತಲೆ ಮರೆಸಿಕೊಂಡಿದ್ದು ಹುಡುಕುವ ಪ್ರಯತ್ನ ಮುಂದುವರಿದಿದೆ. ಆದಷ್ಟು ಶೀಘ್ರದಲ್ಲಿ ಬಂಧಿಸಲಾಗುವುದು ಎಂದು ಭರವಸೆ ನೀಡಿದರು.

ವಿಜಯಾ ಈಗ 9 ತಿಂಗಳ ತುಂಬು ಗರ್ಭಿಣಿಯಾಗಿದ್ದು ಪ್ರಸವದ ದಿನವು ಹತ್ತಿರವಾಗಿರುವ ಕಾರಣ ನಗರದ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾಳೆ. ಈ ಸಂದರ್ಭದಲ್ಲಿ ಜನಶಕ್ತಿ ವೇದಿಕೆಯ ಅಧ್ಯಕ್ಷ ಮಾಧವ ನಾಯಕ, ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಪದಾಧಿಕಾರಿಗಳು ಇದ್ದರು.

ಸಮರ್ಪಕ ಪಡಿತರ ವಿತರಣೆಗೆ ಬಿಜೆಪಿ ಒತ್ತಾಯ

ತೀರ್ಥಹಳ್ಳಿ, ಎ.25: ರಾಜ್ಯ ಸರಕಾರದ ಕೆಲವು ನೀತಿಯಿಂದಾಗಿ ಬಿಪಿಎಲ್ ಕಾರ್ಡ್‌ದಾರರಿಗೆ ಇತ್ತೀಚೆಗೆ ಸೀಮೆಎಣ್ಣೆ, ಉಪ್ಪು, ಬೇಳೆ ಸಿಗುತ್ತಿಲ್ಲ. ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ವಿಪರೀತ ತೊಂದರೆಯಾಗುತ್ತಿದೆ. ಸರಕಾರ ಈ ಬಗ್ಗೆ ಸ್ಪಂದಿಸಿ ಬಿಪಿಎಲ್ ಕಾರ್ಡ್‌ದಾರರಿಗೆ ಸೀಮೆಎಣ್ಣೆ, ಬೇಳೆ, ಉಪ್ಪು ಸಿಗುವಂತೆ ಕ್ರಮ ಕೈಗೊಳ್ಳಬೇಕು ಎಂದು ತಾಲೂಕು ಬಿಜೆಪಿ ಎಸ್ಸಿ,ಎಸ್ಟಿ ಮೋರ್ಚಾ ಒತ್ತಾಯಿಸಿತು.

ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಲಾಗಿದ್ದ ಮೆರವಣಿಗೆ ಹಾಗೂ ಇಲ್ಲಿನ ಗೋಪಾಲಗೌಡ ರಂಗ ಮಂದಿರದಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಮಾಜಿ ಶಾಸಕ ಆರಗ ಜ್ಞಾನೇಂದ್ರ, ಪರಿಶಿಷ್ಟ ಜಾತಿ ಹಾಗೂ ಪಂಗಡದವರು ವಾಸಿಸುವ ಕಾಲನಿಗಳಿಗೆ ರಸ್ತೆ ನಿರ್ಮಿಸುವ ಎಸ್ಸಿಪಿ ಯೋಜನೆಯಲ್ಲಿ ತಾಲೂಕಿನ ಹಲವಾರು ಕಡೆ ಕಾಮಗಾರಿ ನಡೆದಿದೆ ಎಂದರು.

ಎಸ್ಸಿಪಿ ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಬಹುತೇಕ ಎಲ್ಲಾ ಕಾಮಗಾರಿಗಳು ಕಳಪೆಯಾಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗಿರುವ ಸರಕಾರದ ಎಸ್ಸಿಪಿ ಸಹಿತ ಹಲವಾರು ಯೋಜನೆಗಳಲ್ಲಿ ಕಾಂಗ್ರೆಸ್ ಮುಖಂಡರು ತಮ್ಮ ಮನೆಗೆ ರಸ್ತೆ ಇತ್ಯಾದಿ ಕಾಮಗಾರಿ ಮಾಡಿಸಿಕೊಂಡಿದ್ದಾರೆ. ಇದರ ಕುರಿತು ತನಿಖೆಯಾಗಬೇಕು ಎಂದರು.

ಸಭೆಯಲ್ಲಿ ಜಿಪಂ ಸದಸ್ಯ ಶ್ರೀನಿವಾಸ್, ಬಿಜೆಪಿ ಮುಖಂಡ ಕೋಣಂದೂರು ಮೋಹನ್ ಶೆಟ್ಟಿ, ನಾಗರಾಜ ಶೆಟ್ಟಿ, ಸಂದೇಶ್ ಜವಳಿ, ಮೇಲಿನಕುರುವಳ್ಳಿ ಪೂರ್ಣೇಶ್ ಸೇರಿದಂತೆ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ಟಾಟ್‌ಏಸ್-ಬೈಕ್ ಢಿಕ್ಕಿ: ನ್ಯಾಯವಾದಿ ಗಂಭೀರ

ಅಂಕೋಲಾ, ಎ.25: ಟಾಟ್‌ಏಸ್ ವಾಹನವು ಬೈಕ್‌ಗೆ ಹಿಂದಿನಿಂದ ಢಿಕ್ಕಿ ಹೊಡೆದ ಪರಿಣಾಮ ಬೈಕ್ ಚಾಲಕನ ನಿಯಂತ್ರಣಕ್ಕೆ ಸಿಗದೆ ಗಟಾರಕ್ಕೆ ಅಪ್ಪಳಿಸಿದ ಪರಿಣಾಮ ಬೈಕ್ ಸವಾರ ಗಂಭೀರ ಗಾಯಗೊಂಡಿರುವ ಘಟನೆ ಮಂಗಳವಾರ ಮಧ್ಯಾಹ್ನ ಕಾರವಾರ ರಸ್ತೆ ವಾಜಂತ್ರಿ ಕೇರಿ ಸಮೀಪ ನಡೆದಿದೆ.

ನ್ಯಾಯವಾದಿ ಹಾಗೂ ನೋಟರಿ ನಿತ್ಯಾನಂದ ಬಿ. ಕವರಿ ಎಂಬವರೇ ಗಾಯಗೊಂಡ ಬೈಕ್ ಸವಾರ ಎಂದು ಗುರುತಿಸಲಾಗಿದೆ. ಇವರು ಪಟ್ಟಣದ ಅಜ್ಜಿಕಟ್ಟಾದಿಂದ ಮನೆಗೆ ಬರುತ್ತಿರುವ ಸಂದರ್ಭದಲ್ಲಿ ಬಾಳಿಗುಳಿಯಿಂದ ಬೆಳಾಂಬರಕ್ಕೆ ಮಾವಿಕಾಯಿ ಸಾಗಿಸುತ್ತಿದ್ದ ಟಾಟ್‌ಎಸ್ ವಾಹನವು ಹಿಂದಿನಿಂದ ಬೈಕ್‌ಗೆ ಢಿಕ್ಕಿ ಹೊಡೆದು ಈ ಅವಘಡ ನಡೆದಿದೆ. ತಕ್ಷಣ ಹವಾಲ್ದಾರ ಮೋಹನದಾಸ್ ಶೇಣ್ವಿ ಅವರು ಸ್ಥಳಕ್ಕೆ ಭೇಟಿ ನೀಡಿ, ಟಾಟಾ ಏಸ್‌ಚಾಲಕ ಮಹೇಶ ಗಣಪತಿ ಗೌಡನನ್ನು ವಶಕ್ಕೆ ಪಡೆದರು. ಪಿಎಸ್ಸೈ ಎಚ್. ಓಂಕಾರಪ್ಪ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ನಮಾಝ್ (ಅದಾನ್) ವೇಳಾ ಪಟ್ಟಿ

26-04-2017

	ಮಂಗಳೂರು ಕೇಂದ್ರ ಜುಮಾ ಮಸೀದಿ	ಉಡುಪಿ ಜಾಮಿಯಾ ಮಸೀದಿ
ಫಜ್ರ್	4-55	4-55
ಲುಹರ್	12-32	1-00
ಅಸರ್	3-38	4-15
ಮಗ್ರಿಬ್	6-48	6-48
ಇಶಾ	8-01	8-05

ZAINAB ASSADI
Al-Quisais, Dubai

ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾಟ

ಸಂತ ಅನ್ನಮ್ಮ ತಂಡದ ಮಡಿಲಿಗೆ ಟ್ರೋಫಿ

ವೀರಾಜಪೇಟೆ, ಎ.25: ಮೂರು ದಿನಗಳಿಂದ ಇಲ್ಲಿನ ಸಂತ ಅನ್ನಮ್ಮ ಪ್ರೌಢ ಶಾಲಾ ಮೈದಾನದಲ್ಲಿ ಅನ್ನಮ್ಮ ದೇವಾಲಯದ ವತಿಯಿಂದ ಆಯೋಜಿಸಿದ್ದ 6ನೆ ವರ್ಷದ ಜಿಲ್ಲಾ ಮಟ್ಟದ ರೋಮನ್ ಕೆಥೋಲಿಕ್ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾಟದಲ್ಲಿ ಸಂತ ಅನ್ನಮ್ಮ ಎ ತಂಡ ಜಯ ಸಾಧಿಸಿ ಟ್ರೋಫಿ ಹಾಗೂ ರೂ. 25000 ನಗದು ಬಹುಮಾನ ಪಡೆಯಿತು.

ಪಂದ್ಯಾಟದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕ್ರೀಡೆಗಳ ತವರೂರು ಎನಿಸಿರುವ ಕೊಡಗಿನಲ್ಲಿ ವಿವಿಧ ಸಮುದಾಯಗಳಿಂದ ಆಯೋಜಿಸುತ್ತಿರುವ ಕ್ರೀಡಾ ಉತ್ಸವದಿಂದ ಧರ್ಮ ಧರ್ಮಗಳ ಸಮುದಾಯದ ಕುಟುಂಬಗಳ ನಡುವೆ ಸಾಮರಸ್ಯ ಪ್ರೀತಿ ವಿಶ್ವಾಸದ ಬದುಕು ಮುಂದುವರಿಯಲಿದೆ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಸಂತ ಅನ್ನಮ್ಮ ದೇವಾಲಯದ ಧರ್ಮಗುರು ಮದುಲೈಮುತ್ತು, ಮೈಸೂರು ಧರ್ಮ ಪ್ರಾಂತದ ಧರ್ಮಗುರು ರಾಯಪ್ಪ, ಕೆಥೋಲಿಕ್ ಜಿಲ್ಲಾ ಸಂಘದ ಅಧ್ಯಕ್ಷ ಜಯರಾಜ್, ಪಟ್ಟಣ ಪಂಚಾಯತ್ ಅಧ್ಯಕ್ಷ ಸಚಿನ್ ಕುಟ್ಟಯ್ಯ ಮಾತನಾಡಿದರು.

ವೇದಿಕೆಯಲ್ಲಿ ದೇವಾಲಯ ಸಮಿತಿಯ ಚೋಪಿ ಜೋಸೆಫ್, ಕೆದಮುಳ್ಳೂರು ಚರ್ಚ್‌ನ ಫ್ರಾನ್ಸಿಸ್ ಕ್ಸೇವಿಯರ್, ಸಹಾಯಕ ಧರ್ಮಗುರು ಬಾಲರಾಜ್, ಸಿದ್ದಾಪುರ ಚರ್ಚ್‌ನ ಜಾನಾಸ್ ಸೇರಿದಂತೆ ಜಿಲ್ಲೆಯ ವಿವಿಧ ಚರ್ಚ್‌ಗಳ ಧರ್ಮಗುರುಗಳು ಉಪಸ್ಥಿತರಿದ್ದರು.

ಸಹಾಯಕ ಧರ್ಮ ಗುರು ಟೆನ್ನಿ ಕುರಿಯನ್ ಸ್ವಾಗತಿಸಿದರು. ಚಾರ್ಲ್ಸ್ ಡಿಸೋಜ ನಿರೂಪಿಸಿದರು. ಧರ್ಮಗುರು ಬಾಲರಾಜ್ ವಂದಿಸಿದರು.

ನಾನು ಕಾಂಗ್ರೆಸ್ ಸೇರುತ್ತೇನೆ ಎನ್ನುವುದು ನಮ್ಮದೇ ಪಕ್ಷದವರ ಅಪಪ್ರಚಾರ

ಮಾಜಿ ಸಚಿವ ಹಾಲಪ್ಪ



ಸಾಗರ, ಎ.25: ತಾನು ಕಾಂಗ್ರೆಸ್ ಪಕ್ಷ ಸೇರುತ್ತೇನೆ ಎಂಬುದು ನೂರಕ್ಕೆ ನೂರು ಸುಳ್ಳು. ಇದು ನಮ್ಮ ಪಕ್ಷದ ಕೆಲವರು ಮಾಡಿರುವ ಅಪಪ್ರಚಾರ. ಬಿಜೆಪಿಗೆ ನನ್ನ ನಿಷ್ಠೆ ಪ್ರಶ್ನಾತೀತ ಎಂದು ಎಂದು ಮಾಜಿ ಸಚಿವ ಎಚ್.ಹಾಲಪ್ಪ ಸ್ಪಷ್ಟಪಡಿಸಿದ್ದಾರೆ.

ಪಟ್ಟಣದಲ್ಲಿ ಇತ್ತೀಚೆಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತೇನೆ. ಸಚಿವ ಕಾಗೋಡು ಅವರನ್ನು ಭೇಟಿ ಮಾಡಿದ್ದೇನೆ ಎಂದು ಇತ್ತೀಚೆಗೆ ಅಪಪ್ರಚಾರ ಮಾಡಲಾಗಿದೆ. ಇದು ಜನರಲ್ಲಿ ಗೊಂದಲವುಂಟು ಮಾಡಿದೆ. ಇದಕ್ಕಾಗಿ ಸ್ಪಷ್ಟನೆ ಕೊಡುತ್ತಿದ್ದೇನೆ ಎಂದರು.

ಕಾಂಗ್ರೆಸ್ ಪಕ್ಷದ ಯಾವ ಹಂತದ ಮುಖಂಡರನ್ನೂ ನಾನು ಭೇಟಿ ಮಾಡಿಲ್ಲ. 4-6 ಕಡೆ ಪಕ್ಷಾಂತರ ಮಾಡಿದವರು ನನ್ನ ನಿಷ್ಠೆಯನ್ನು ಪ್ರಶ್ನಿಸುತ್ತಿದ್ದಾರೆ. ಪಕ್ಷ ಬದಲಿಸಿದವರಿಗೆ ಈ ಅಭ್ಯಾಸವಿದೆ. ಅವರು ಬೇಕಾದರೆ ಕಾಂಗ್ರೆಸ್‌ಗೆ ಹೋಗಲಿ ಎಂದು ವ್ಯಂಗ್ಯವಾಡಿದರು. ನಾನು ಸೊರಬದಲ್ಲೇ ಸ್ಪರ್ಧಿಸಲು ಟಿಕೆಟ್ ಕೇಳುತ್ತೇನೆ. ಪಕ್ಷದಲ್ಲೇ ಇರುತ್ತೇನೆ ಎಂದವರು ಸ್ಪಷ್ಟಪಡಿಸಿದರು.

ಹೊಸದಾಗಿ ಪಕ್ಷ ಸೇರಿದವರಿಗೆ ಟಿಕೆಟ್ ಕೊಡುವುದಾಗಿ ಯಾರೂ ಎಲ್ಲೂ ಹೇಳಿಲ್ಲ ಎಂದವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಮಹಾಬಲೇಶ್ವರ ನಾಯ್ಕ ಸೈದೂರು, ಆನಂದ ತಾಳಗುಪ್ಪ, ಅಶೋಕ್ ಸೂರುಗುಪ್ಪೆ , ಅರುಣ, ಗಣಪತಿ ಸೈದೂರು, ಅಣ್ಣಪ್ಪ ಸೈದೂರು, ವಿನಾಯಕ ಇದ್ದರು.

ಹೋರಾಟದ ಮೂಲಕ ಸರಕಾರಿ ಭೂಮಿ ರಕ್ಷಣೆ: ಸಿಪಿಐಎಂಎಲ್

ಚಿಕ್ಕಮಗಳೂರು, ಎ.25: ಬೆಂಗಳೂರಿನ ಪ್ರಭಾವಿ ವ್ಯಕ್ತಿಯೊಬ್ಬರು ಕಬಳಿಸಲು ಮುಂದಾಗಿದ್ದ ಸರಕಾರಿ ಭೂಮಿಯನ್ನು ಚಳವಳಿ ಮೂಲಕ ಮೂಡಿಗೆರೆಯ ವಸತಿಗಾಗಿ ಹೋರಾಟದ ಮೂಲ ನಿವೇಶನ ರಹಿತರು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸಿಪಿಐಎಂಎಲ್ ಜಿಲ್ಲಾ ಇಸಿ ಸದಸ್ಯ ಸಿ.ಜೆ.ಜಗನ್ನಾಥ್ ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಳೇ ಮೂಡಿಗೆರೆ ಗ್ರಾಪಂ ವ್ಯಾಪ್ತಿಗೆ ಸಂಬಂಧಿಸಿದ ನಿವೇಶನ ರಹಿತರು ತಮಗೇ ಸ್ವಂತ ಮನೆ ಇಲ್ಲದೇ ಬಾಡಿಗೆ ಮನೆಯಲ್ಲಿದ್ದುಕೊಂಡು ಕಷ್ಟದಿಂದ ಜೀವನವನ್ನು ಸಾಗಿಸುತ್ತಿದ್ದೇವೆ. ನಮಗೆ ಒಂದು ಸೂರನ್ನು ಒದಗಿಸಿಕೊಡಿ ಎಂದು ವಸತಿಗಾಗಿ ಹೋರಾಟ ವೇದಿಕೆಯ ನೇತೃತ್ವದಲ್ಲಿ ನಿವೇಶನಕ್ಕಾಗಿ ಹಲವಾರು ಬಾರಿ ಹೋರಾಟ ನಡೆಸಿ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರೂ ಇದುವರೆಗೂ ಇವರ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗಿಲ್ಲ.

ನಿವೇಶನ ರಹಿತರು ತಮಗೆ ನಿವೇಶನ ನೀಡುವಂತೆ ಒತ್ತಾಯಿಸಿ ಸರ್ವೆ ನಂ.7ರಲ್ಲಿ ಗುಡಿಸಲು ಹಾಕಿಕೊಂಡು ಚಳವಳಿ ನಡೆಸಿದ್ದು, ಏಕಾಏಕಿ ತಾಲೂಕು ಆಡಳಿತ ಗುಡಿಸಲನ್ನು ತೆರವುಗೊಳಿಸಲು ಮುಂದಾಗಿರುವುದು ಖಂಡನೀಯ. ಕೂಡಲೇ ನಿವೇಶನ ರಹಿತರಿಗೆ ನಿವೇಶನ ಮಂಜೂರು ಮಾಡಬೇಕು. ಇಲ್ಲಿನ ಕಂದಾಯ ಭೂಮಿಯನ್ನು ಬೆಂಗಳೂರಿನ ವ್ಯಕ್ತಿಯೊಬ್ಬ ಕಬಳಿಸಲು ಮುಂದಾಗಿದ್ದನ್ನು ವಸತಿಗಾಗಿ ಹೋರಾಟ ವೇದಿಕೆಯ ನೇತೃತ್ವದಲ್ಲಿ ನಿವೇಶನ ರಹಿತರು ಚಳವಳಿ ಮೂಲಕ ಸರಕಾರದ ಭೂಮಿಯನ್ನು ಉಳಿಸಿದ್ದಾರೆಂದರು.

ಸರಕಾರಗಳು ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮತ್ತು ರೈತರನ್ನು, ಕಾರ್ಮಿಕರನ್ನು ಬಡಜನತೆಯನ್ನು ಅಭಿವೃದ್ಧಿಪಡಿಸುವಲ್ಲಿ ವಿಫಲವಾಗಿದ್ದು, ಇಂತಹ ಜನವಿರೋಧಿ ಸರಕಾರಗಳ ವಿರುದ್ಧ ಹೋರಾಟಕ್ಕೆ ಜನತೆ ಮುಂದಾಗಬೇಕು. ಇಲ್ಲದಿದ್ದರೆ ವೇದಿಕೆಯ ಹೋರಾಟಕ್ಕೆ ಪಕ್ಷವು ಬೆಂಬಲ ನೀಡುವ ಮೂಲಕ ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅಕ್ರಮ ಮದ್ಯ: ಆರೋಪಿ ಬಂಧನ

ಚಿಕ್ಕಮಗಳೂರು, ಎ.25: ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ವ್ಯಕ್ತಿಯೋರ್ವನನ್ನು ಮಂಗಳವಾರ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ಮಲ್ಲಂದೂರು ಬಳಿಯ ಚಂದ್ರೇಗೌಡ ಎಂದು ಗುರುತಿಸಲಾಗಿದೆ. ಈತ ಮಲ್ಲಂದೂರು ರಸ್ತೆಯ ಖಾಸಗಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡುತ್ತಿದ್ದ. ಈ ಸಮಯದಲ್ಲಿ ದಾಳಿ ನಡೆಸಿದ ಪೊಲೀಸರು 2,688 ರೂ.ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯಿಂದ 90 ಎಂಎಲ್‌ನ 96 ಪ್ಯಾಕೆಟ್ ಮಾರ್ಟಿನ್ ಸ್ಪೆಷಲ್ ವಿಸ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ರಾಜ್ ಹುಟ್ಟುಹಬ್ಬ ಆಚರಣೆ

ಚಿಕ್ಕಮಗಳೂರು, ಎ.25: ಪಟ್ಟಣದ ಚಂದ್ರಮೌಳೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಡಾ.ರಾಜ್ ಸಂಘದ ಕಾರ್ಯಕರ್ತರು ಸೋಮವಾರ ರಾಜ್‌ಕುಮಾರ್ ಜನ್ಮದಿನ ಆಚರಿಸಲಾಯಿತು.

ಸಂಘದ ಅಧ್ಯಕ್ಷ ಕೆ.ವಿ.ವಾಸು ಮಾತನಾಡಿ, ಡಾ.ರಾಜ್‌ಕುಮಾರ್‌ರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ತಾಲ್ಲೂಕಿನಾದ್ಯಂತ ತೀವ್ರ ಬರಗಾಲವಿದ್ದು, ಜನ-ಜಾನುವಾರುಗಳಿಗೆ, ಪ್ರಾಣಿ-ಪಕ್ಷಿಗಳು ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ. ಚಂದ್ರಮೌಳೇಶ್ವರ ಸ್ವಾಮಿ ಕೃಪೆಯಿಂದ ಉತ್ತಮ ಮಳೆ ಬಂದು ಕುಡಿಯುವ ನೀರಿನ ತೊಂದರೆ ನಿವಾರಣೆಯಾಗಬೇಕಿದೆ ಎಂದು ಸ್ವಾಮಿಯವರಿಗೆ ಅಭಿಷೇಕ ವಿಶೇಷ ಪೂಜೆಯನ್ನೂ ಈ ದಿವಸ ಏರ್ಪಡಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭಾ ಸದಸ್ಯ ಮುಳ್ಳಿ ರವಿ, ಕೆ. ಶ್ರೀನಿವಾಸ್, ಕೆ.ಎಂ. ಸುರೇಶ್, ಕೆ.ಟಿ. ಮಹೇಂದ್ರ, ರಿಯಾಝ್ ಅಹ್ಮದ್,ತಾರಾನಾಥ್, ದೇವರಾಜ್, ಚಂದ್ರೇಗೌಡ, ಕೃಷ್ಣಮೂರ್ತಿ, ಆರ್.ಎಂ. ಬಸವರಾಜ್, ಭರತ್ ಉಪಸ್ಥಿತರಿದ್ದರು.

ಟ್ರ್ಯಾಕ್ಟರ್ ಪಲ್ಟಿ: 20 ಜನರಿಗೆ ಗಾಯ

ಶಿವಮೊಗ್ಗ, ಎ.25: ಚಾಲಕನ ನಿಯಂತ್ರಣ ಕಳೆದುಕೊಂಡ ಟ್ರ್ಯಾಕ್ಟರ್‌ವೊಂದು ಪಲ್ಟಿಯಾಗಿ ಬಿದ್ದ ಪರಿಣಾಮ ಸುಮಾರು 20 ಜನ ಗಾಯಗೊಂಡಿರುವ ಘಟನೆ ಪ್ರಸಿದ್ಧ ಧಾರ್ಮಿಕ ತಾಣ ಹಣಗೆರೆಕಟ್ಟೆಯ ಬಳಿ ಮಂಗಳವಾರ ನಡೆದಿದೆ.

ಕುಂಸಿ ಕಡೆಯಿಂದ ಹಣಗೆರೆ ದೇವಸ್ಥಾನಕ್ಕೆ ಈ ಟ್ರ್ಯಾಕ್ಟರ್ ತೆರಳುತ್ತಿತ್ತು. ಗಾಯಾಳುಗಳನ್ನು ತಕ್ಷಣವೇ ಶಿವಮೊಗ್ಗದ ಸರಕಾರಿ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರ್ಯಾಕ್ಟರ್ ಚಾಲಕನ ಅಜಾಗರೂಕ, ವೇಗದ ಚಾಲನೆಯೇ ಅವಘಡಕ್ಕೆ ಕಾರಣವಾಗಿದೆ ಎಂದು ತಿಳಿದುಬಂದಿದೆ.

ಘಟನಾ ಸ್ಥಳಕ್ಕೆ ಸಬ್ ಇನ್‌ಸ್ಪೆಕ್ಟರ್ ಗುರುರಾಜ್ ಮತ್ತವರ ಸಿಬ್ಬಂದಿ ಭೇಟಿಯಿತ್ತು ಪರಿಶೀಲನೆ ನಡೆಸಿದರು. ಈ ಸಂಬಂಧ ಮಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಣಗಿದ ಬೆಳೆ: ರೈತ ಆತ್ಮಹತ್ಯೆ

ಶಿವಮೊಗ್ಗ, ಎ.25: ಬೆಳೆ ಒಣಗಿದ್ದರಿಂದ ಮನನೊಂದ ಯುವ ರೈತರೊಬ್ಬರು ಹೊಸದಾಗಿ ನಿರ್ಮಾಣ ಮಾಡುತ್ತಿರುವ ತಮ್ಮ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಸೊರಬ ತಾಲೂಕಿನ ಕೋಡಿಕೊಪ್ಪ ಗ್ರಾಮದಲ್ಲಿ ಸೋಮವಾರ ವರದಿಯಾಗಿದೆ.

ಪ್ರದೀಪ್(23) ಆತ್ಮಹತ್ಯೆಗೆ ಮಾಡಿಕೊಂಡವರೆಂದು ಗುರುತಿಸಲಾಗಿದೆ. ಗ್ರಾಮದ ಸರ್ವೆ ನಂಬರ್ 80ರಲ್ಲಿ 4.30 ಗುಂಟೆ ಜಮೀನಿದ್ದು ಮೃತ ಪ್ರದೀಪ್‌ರ ತಂದೆ ಶಿವಾಜಿಗೌಡ ಹಾಗೂ ಸಹೋದರರ ಹೆಸರಿನಲ್ಲಿದೆ.

ಇದರಲ್ಲಿ ಆರು ಬೋರ್‌ವೆಲ್ ಕೊರೆಯಿಸಲಾಗಿದ್ದು, ಐದರಲ್ಲಿ ನೀರು ಸಿಕ್ಕಿರಲಿಲ್ಲ. ಇತ್ತೀಚೆಗೆ ನೀರು ಬರುತ್ತಿದ್ದ ಬೋರ್‌ವೆಲ್‌ನಲ್ಲಿಯೂ ನೀರು ಕಡಿಮೆಯಾಗಿತ್ತು. ಇದರಿಂದ ಅಲಸಂದಿ ಮತ್ತಿತರ ಬೆಳೆ ಒಣಗಿ ಹೋಗಿತ್ತು.

ಅಲ್ಲದೆ, ಕೃಷಿಗಾಗಿ ಸ್ಥಳೀಯ ರಾಷ್ಟ್ರೀಕೃತ ಹಾಗೂ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಕೂಡ ಮಾಡಿದ್ದರು. ಇದರಿಂದ ಮನನೊಂದು ಪ್ರದೀಪ್‌ರವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಆನವಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಬಿಗಿದು ಯುವಕ ಆತ್ಮಹತ್ಯೆ

ಮುಂಡಗೋಡ, ಎ.25: ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಪಟ್ಟಣದ ಹೊಟೇಲ್ ವಸತಿ ಗೃಹವೊಂದರಲ್ಲಿ ಸೋಮವಾರ ರಾತ್ರಿ ಸಂಭವಿಸಿದೆ.

ತಾಲೂಕಿನ ಕರಗಿನಕೊಪ್ಪ ಗ್ರಾಮದ ಕೃಷ್ಣ ಲಮಾಣಿ (20) ನೇಣಿಗೆ ಕೊರಳೊಡ್ಡಿದ ಯುವಕ ಎಂದು ಗುರುತಿಸಲಾಗಿದೆ. ಮೃತನು ಪಟ್ಟಣದ ಹೊಟೇಲ್‌ವೊಂದರಲ್ಲಿ ಕೆಲಸಮಾಡುತ್ತಿದ್ದ. ಎಂದಿನಂತೆ ಸೋಮವಾರ ರಾತ್ರಿಯವರೆಗೂ ಕೆಲಸ ಮಾಡುತ್ತಿದ್ದ ಎಂದು ಹೇಳಲಾಗಿದ್ದು ಸುಮಾರು 9:30ರಿಂದ 10 ಗಂಟೆಯ ಸಮಯದಲ್ಲಿ ಹೊಟೇಲಿನ ಮೇಲಿನ ಮಹಡಿ ರೂಮ್‌ನಲ್ಲಿ ನೇಣುಬಿಗಿದುಕೊಂಡಿರಬಹುದು ಎಂದು ಅಂದಾಜಿಸಲಾಗಿದೆ ಹೊಟೇಲಿನ ಸಿಬ್ಬಂದಿ ಈತನನ್ನು ಹುಡಕಿಕೊಂಡು ಮಹಡಿಯ ರೂಮ್‌ಗೆ ಹೋದಾಗ ಘಟನೆ ಬೆಳಕಿಗೆ ಬಂದಿದೆ. ತಕ್ಷಣ ಮುಂಡಗೋಡ ತಾಲೂಕು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಉಳಿಸುವ ಪ್ರಯತ್ನ ಸಫಲವಾಗಲಿಲ್ಲ ಎಂದು ಹೇಳಲಾಗಿದೆ ಈ ಕುರಿತು ಮುಂಡಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ವೀರಾಜಪೇಟೆ, ಎ.25: ಪಂಜರಪೇಟೆಯ ದಿವಂಗತ ಅಬ್ದುಲ್ ಖಾದರ್‌ರ ಪತ್ನಿ ಆಯಿಶಾಬಿ(75) ಎ.25ರ ಬೆಳಗಿನ ಜಾವ ನಿಧನ ಹೊಂದಿದರು. ಮೃತರು ನಾಲ್ಕು ಜನ ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಮಂಜೇಶ್ವರ ಮಳ್‌ಹರ್
ಸ್ವಲಾತ್ ಮಜ್ಲಿಸ್ ನಾಳೆ
2017 ಎಪ್ರಿಲ್ 27 07:00 PM ಗುರುವಾರ
ನೇತೃತ್ವ: ಸಯ್ಯಿದ್ ಅಬ್ದುರ್ರಹ್ಮಾನ್ ಶಹೀರ್ ಅಲ್ ಬುಖಾರಿ
ಉದ್ಘಾಟನೆ: ಬಹು। ಎನ್.ವಿ. ಹಂಝುಕೋಯ ಬಾಖವಿ ಅಲ್ ಕಾಮಿಲಿ, ಕಡಲುಂಡಿ
ಮಧ್ಯಾಹ್ನ 2 ಗಂಟೆಗೆ ಮಹಿಳಾ ತರಬೇತಿ ಹಾಗೂ ಆತ್ಮೀಯ ಸಂಗಮ
ನೇತೃತ್ವ: ಅನಸ್ ಸಿದ್ದೀಖಿ ಶಿರಿಯ
MALHARU NOORIL ISLAMI THA'ALEEMI
Al-Bukhari Compound, Hosangadi, Majeshwar, Kasaragod | Ph: 04998-273044, 08891001205